ಅ) ಇತ್ಯರ್ಥವಾದ ಮೇಲ್ಮನವಿಗಳ ಅಫೀಲುಗಳ ಸಂಖ್ಯೆ :

೧೯೮೨-೮೩	...	೩,೮೩೮
೧೯೮೩-೮೪	...	೫,೫೧೧
೧೯೮೪-೮೫	...	೮,೩೩೩

ಇತ್ಯರ್ಥವಾದ ರಿಟ್ ಅರ್ಜಿಗಳ ಸಂಖ್ಯೆ :

೧೯೮೨-೮೩	...	೨೧,೪೭೭
೧೯೮೩-೮೪	...	೨೯,೭೯೧
೧೯೮೪-೮೫	...	೩೬,೯೨೯

ಅಫ್‌ಜಲ್‌ಪುರ ಪಟ್ಟಣಕ್ಕೆ ಫಿಲ್ಟರ್ ಮಾಡಿದ ನೀರು ಸರಬರಾಜು ಮಾಡುವ ಕುರಿತು

೨೬೦ (೫೪೧) ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫಜಲ್‌ಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ:—

ಅ) ಅಫಜಲ್‌ಪುರ ಪಟ್ಟಣಕ್ಕೆ ಭೀಮಾ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವುದರಿಂದ ಸಾಂಕ್ರಾಮಿಕ ರೋಗಗಳು ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಭೀಮಾ ನದಿಯಿಂದ ನೇರವಾಗಿ ಬರುತ್ತಿರುವ ನೀರನ್ನು ಶೋಧಿಸಿ ಸರಬರಾಜು ಮಾಡಲು ಸರ್ಕಾರ ಯೋಚಿಸುತ್ತಿದೆಯೇ ?

ಇ) ಹಾಗಿದ್ದಲ್ಲಿ ನೀರನ್ನು ಶೋಧಿಸಿ ಸರಬರಾಜು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—

ಅ) ನೀರಿನ ದೋಷದಿಂದ ಉಂಟಾಗುವ ರೋಗಗಳು ಯಾವುವೂ ಕಂಡು ಬಂದಿಲ್ಲ.

ಆ) ಭೀಮಾ ನದಿಯಿಂದ ಬರುತ್ತಿರುವ ನೀರನ್ನು ಶೋಧಿಸಿ ಪಟ್ಟಣಕ್ಕೆ ಸರಬರಾಜು ಮಾಡಲಾಗುತ್ತಿದೆ.

ಇ) ಭೀಮಾ ನದಿ ನೀರನ್ನು ಪಡೆದು ಸ್ಫಟಿಕವನ್ನು ಮಿಶ್ರಣ ಮಾಡಿ ಕ್ಲಾರಿ ಫ್ಲೂಕ್ಯುರೇಟರ್ ಗಳಲ್ಲಿ ಮಣ್ಣಿನ ಅಂಶವನ್ನು ಬೇರ್ಪಡಿಸಿ ಫಿಲ್ಟರ್‌ಗಳಲ್ಲಿ ಶೋಧಿಸಿ ಕ್ಲೋರಿನೇಷನ್ ಮಾಡಿ ಜನರಿಗೆ ಕುಡಿಯಲು ನೀರು ಸರಬರಾಜು ಮಾಡಲಾಗುವುದು.

ಮೈಸೂರು ನಗರಾಭಿವೃದ್ಧಿ ಮಂಡಲಿಯಿಂದ ನಿರ್ಮಿಸಲಾದ ಮನೆಗಳ ಹಂಚಿಕೆ

೨೬೧ (೧೩೭) ಶ್ರೀಮತಿ ಮುಕ್ತಾರುನ್ನೀಸಾ (ನರಸಿಂಹರಾಜ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಯವರು ಮೈಸೂರು ನಗರದಲ್ಲಿ ನಗರದಲ್ಲಿ ಕಟ್ಟಿರುವ ಮನೆಗಳನ್ನು ಕಟ್ಟಿಡದ ಕೆಲಸ ಮುಗಿದಿದ್ದರೂ ಸಾರ್ವಜನಿಕರಿಗೆ ಹಂಚಿಲ್ಲ. ಕಾರಣಗಳನ್ನು ತಿಳಿಸುವಿರಾ?

ಆ) ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಯು ನಿವೇಶನವಿಲ್ಲದ ಬಡ ಜನರಿಗೆ ಇಲ್ಲಿಯವರೆಗೂ ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು?